# ಅಂಗಾರದ ಕಲ್ಲು



ಚಿಕ್ಕೋಡಿ ತಾಲ್ಲೂಕಿನ ಕೃಷ್ಣಾನದಿ ತೀರದಲ್ಲಿರುವ ಯಡೂರಿನ ವೀರಭದ್ರ ದೇವಾಲಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ದೇವಾಲಯದ ಉಸ್ತುವಾರಿ ನೋಡಿಕೊಳ್ಳುತ್ತಿರುವ ಶ್ರೀ ಕಾಡಸಿದ್ಧೇಶ್ವರ ಸಂಸ್ಥಾನ ಮಠಕ್ಕೂ ಅಷ್ಟೇ ಭವ್ಯ ಇತಿಹಾಸವಿದೆ. ಈ ಮಠದಲ್ಲಿ ಅನೇಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಚಿತ್ರದಲ್ಲಿ ಕಾಣುತ್ತಿರುವ ಮಠದ ಮುಂದಿರುವ ಈ ಅಂಗಾರದ (ವಿಭೂತಿ) ಕಲ್ಲು ನೋಡಲು ಅತ್ಯಾಕರ್ಷಕವಾಗಿದೆ. ಮೇಲೆ ಬಟ್ಟಲಿನಾಕಾರವಿದ್ದು, ಚಂದವಾದ ಹಿಡಿಕೆಯನ್ನು ಹೊಂದಿದೆ. ಪೀಠ ಚಿಕ್ಕದಿದ್ದರೂ ತೊನೆದಾಡದೇ ಬಲವಾಗಿ ನಿಂತಿದೆ. ಮಠದಲ್ಲಿರುವ ವಿದ್ಯಾರ್ಥಿಗಳು ಹಾಗೂ ಅಲ್ಲಿಗೆ ಬರುವ ಭಕ್ತರು ಇಂದಿಗೂ ಅದರಲ್ಲಿರುವ ವಿಭೂತಿಯನ್ನು ಧರಿಸಿ ಶ್ರೀ ಕಾಡಸಿದ್ಧೇಶ್ವರರ ಗದ್ದುಗೆಗೆ ನಮಸ್ಕರಿಸುತ್ತಾರೆ.

–ಸೀತಾ ಎಸ್. ನಾರಾಯಣ, ಹರಿಹರ



# ಗದ್ದೆ ನಾಟಿ ಕಾಯಕ ಯಜ್ಞದ ಪೂರ್ಣಾಹುತಿ

ಇತ್ತೀಚಿನ ವರ್ಷಗಳಲ್ಲಿ ಮಲೆನಾಡಿನ ಕೃಷಿ ಕ್ಷೇತ್ರ ಹಲವು ಬಗೆಯ ತಲ್ಲಣಗಳಿಗೆ ಒಳಗಾಗಿರುವುದು ಕಂಡುಬರುತ್ತಿದೆ. ಪ್ರಮುಖ ವಾಣಿಜ್ಯ ಬೆಳೆಯಾದ ಅಡಿಕೆಗೆ ಹಳದಿ ರೋಗ, ಎಲೆ ಚುಕ್ಕಿ ರೋಗ ಆವರಿಸಿದ್ದರೆ, ಪ್ರಮುಖ ಆಹಾರ ಧಾನ್ಯವಾದ ಭತ್ತವನ್ನು ಬೆಳೆಯಲೂ ರೈತರು ಹಿಂದೆ ಸರಿಯುತ್ತಿದ್ದಾರೆ. ಕಾರಣ, ನಷ್ಟದ ಭಯದಿಂದ. ಸಸಿ ನಾಟಿ ಮಾಡುವ, ಕಳೆ ಕೀಳುವ ಕೃಷಿ ಕಾರ್ಮಿಕರೀಗ ವಿರಳವಾಗಿದ್ದಾರೆ. ಪೈರು ಕಟಾವಿಗೆ ಒಕ್ಕಲಾಟಕ್ಕೆ ಯಂತ್ರಗಳು ಬಂದಿದ್ದರೂ ಅವುಗಳ ನಿರ್ವಹಣೆ, ಬೀಜ ಬಿತ್ತನೆಯಿಂದ ಭತ್ತವನ್ನು ಮೂಟೆಗಳಲ್ಲಿ ತುಂಬುವವರೆಗೂ ಯಾವುದೇ ವಿಕೋಪಗಳಿಗೆ ತುತ್ತಾಗದೆ ಕಾಪಾಡಿಕೊಳ್ಳುವುದೂ ರೈತರಿಗೆ ಸವಾಲಾಗಿ ಪರಿಣಮಿಸಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಮಲೆನಾಡಿನ ಗದ್ದೆಗಳೂ ಬಡಾವಣೆಗಳಾಗಿ ರೂಪುಗೊಳ್ಳುತ್ತಿವೆ.

ಪರಿಸ್ಥಿತಿ ಹೀಗಿರುವಾಗ ನ.ರಾ.ಪುರದ ಗದ್ದೆಯೊಂದರಲ್ಲಿ ಭತ್ತ ನಾಟಿ ಮಾಡಿದ ನಂತರ, ಹಿಂದಿನ ಪದ್ಧತಿಯಾದ ಪೂರ್ಣಾಹುತಿ ಕೊಡುವ ದೃಶ್ಯವೊಂದು ಕಂಡುಬಂದಿದ್ದು ಕಳೆದ ನಾಟಿ ಸಮಯದಲ್ಲಿ. ಗದ್ದೆ ನಾಟಿ ನಂತರ 'ನಾಟಿ' ಎಂಬ ಕಾಯಕ ಯಜ್ಞದ ಕೊನೆಯಲ್ಲಿ, ನೆಟ್ಟ ಸಸಿಗಳು ಯಾವುದೇ ವಿಕೋಪಗಳಿಗೆ ತುತ್ತಾಗದೆ, ಒಳ್ಳೆಯ ಬೆಳೆ ಬೆಳೆದು ಎಲ್ಲರ ಬದುಕು ಹಸನಾಗಲೆಂದು ಅರ್ಪಿಸುವ ಪೂರ್ಣ ಆಹುತಿಯಿದು. ಅದಕ್ಕೆ ಮಾಡುವ ಪ್ರಾರ್ಥನೆ ತುಳು ಭಾಷೆಯಲ್ಲಿದೆ. ಗದ್ದೆ ಅಂಚಿನಲ್ಲಿ ನಿಂತು, ಸಸಿಗಳನ್ನು ಬಲ ಗೈನಲ್ಲಿ ಹಿಡಿದುಕೊಂಡು 'ಓ ದ್ಯಾವರೇ, ಜೋಕ್ಲು ಕೈಕಂಜಿ ಕ್ಲು ಬಂಜಿ ತುಂಬರ, ಅರಿ ಬೈ ಬುಳೆರ್ರ ನಾಟಿ ಮಲ್ತ. ನಾಟಿ ಮಲ್ತುನ ಎಡ್ಡೆ ಬುಳಪ್ಪಾದು ಎಂಕ್ಲೆನ ಮಾತೆರ್ನ ಕಾಪಾಡ್ಲೆ'. ತುಳು ಲಾವಣಿಯಂತಿರುವ ಈ ನಾಟಿ ಪದಗಳೂ ವಿರಳ. ಗದ್ದೆಗಳನ್ನು, ಭತ್ತ ಬೆಳೆಯುವ ರೈತರನ್ನು ಇಂಥ ಜನಪದ ಆಚರಣೆಗಳ ಸಾಹಿತ್ಯ ಉಳಿಸಬೇಕಾದ ಹೊಣೆ ನಮ್ಮೆಲ್ಲರದ್ದು.

–ಎಸ್.ಎನ್. ಚಂದ್ರಕಲಾ ಕೊಪ್ಪ

# ಅಕ್ಕಿ ಮಾಡಲು ಮರದ ಗಾಣ

ಈಗಲೂ ಒಣಕೊಬ್ಬರಿಯಿಂದ ಎಣ್ಣೆ ತೆಗೆಯಲು ಸುಧಾರಿತ ಯಂತ್ರಕ್ಕಿಂತ ಮರದ ಗಾಣವೇ ಶ್ರೇಷ್ಠ ಎನ್ನುತ್ತಾರೆ ಬಹುತೇಕರು. ಮರದ ಗಾಣದಲ್ಲಿ ತೆಗೆದ ಎಣ್ಣೆಯು ಹಾಳಾಗದೆ ಹೆಚ್ಚು ಕಾಲ ತಾಜಾತನದ ಸ್ಥಿತಿಯಲ್ಲಿರುವುದೇ ಇದಕ್ಕೆ ಮುಖ್ಯ ಕಾರಣ. ಭತ್ತ ಒಡೆಯಲು 'ಅಕ್ಕಿ ಗಿರಣಿ' ಬರುವುದಕ್ಕೂ ಪೂರ್ವದಲ್ಲಿ ಜನರು ಮರದ ಸರಳ ಸಾಧನಗಳನ್ನು ಮಾಡಿಕೊಂಡು, ಮಾನವ ಶ್ರಮದಿಂದ ಮರದ ಗಾಣವನ್ನು ತಿರುಗಿಸುವುದನ್ನೇ ಆಶ್ರಯಿಸಿದ್ದರು. ಅದು ಆಗಿನ ವಿಶೇಷವೂ ಆಗಿತ್ತು.

ಅಂದು ದೊಡ್ಡ ಪ್ರಮಾಣದ ಭತ್ತವನ್ನು ಅಕ್ಕಿಯಾಗಿಸಲು ಈಗಿನಂತೆ ವಿದ್ಯುತ್ ಚಾಲಿತ ಯಂತ್ರಗಳು ಇರಲಿಲ್ಲ. ತಾಲ್ಲೂಕಿಗೆ ಒಂದೆರಡು ಗಿರಣಿಗಳು ಇದ್ದರೂ, ಅವುಗಳು ಇರುವೆಡೆಗೆ ಭತ್ತವನ್ನು ಸಾಗಿಸುವುದು ಸಣ್ಣ ರೈತರಿಗೆ ಸಾಧ್ಯವಾಗುತ್ತಿರಲಿಲ್ಲ. ಇದರಿಂದ ತೊಂದರೆ ಅನುಭವಿಸುತ್ತಿದ್ದರು. ಈ ಸಮಸ್ಯೆಗೆ ಪರ್ಯಾಯವಾಗಿ ಅವರು ಕಂಡುಕೊಂಡಿದ್ದೇ ಮನೆಯಲ್ಲೇ ಹಿಟ್ಟು ಮಾಡುವ ಬೀಸೋ ಕಲ್ಲಿನ ತರಹದ ದೊಡ್ಡಗಾತ್ರದ ಮರದ ಸಾಧನ. ಚಿತ್ರದಲ್ಲಿ ಕಾಣುತ್ತಿರುವುದೂ ಅದೇ ಸಾಧನದ ಚಿತ್ರ. ಜೋರಾಗಿ ತಿರುಗಿಸಿದಾಗ ಇದರಲ್ಲಿನ ಅಡ್ಡ ಸಾಲಿನ ಗೆರೆಯಂತಿರುವ ಹಲ್ಲುಗಳು ಭತ್ತವನ್ನು ಒಡೆದು ಅಕ್ಕಿಯನ್ನು ಹೊರಗೆ ಹಾಕುತ್ತಿದ್ದವು.

–ಅರ್ಚನಾ ಜಿ. ಬೊಮ್ನಳ್ಳಿ, ಶಿರಸಿ

